





# ಸ್ಪೇನಿನಲ್ಲೊಂದು ಚಕ್ರವ್ಯೂಹ!

ಮಹಾಭಾರತ ಯುದ್ಧದಲ್ಲಿ ಚಕ್ರವ್ಯೂಹದ ರಚನೆ ಕೇಳಿರಬೇಕಲ್ಲ, ಕೌರವರು ಈ ಆಕಾರದಲ್ಲಿ ನಿಲ್ಲಿಸಿದ್ದ ಸೈನಿಕರನ್ನು ಹೊಡೆದು ಉರುಳಿಸುತ್ತ ಒಳ ನುಗ್ಗಿದ ಅಭಿಮನ್ಯು ಅದರಿಂದ ಹೊರಬರಲಾರದೆ ಹತನಾದ ಕಥೆಯದು. ಇಂತಹ ಚಕ್ರವ್ಯೂಹದ ಮಾದರಿಯ ಎಕರೆಗಟ್ಟಲೆ ವಿಸ್ತೀರ್ಣದ ಉದ್ಯಾನಗಳು ಸ್ಪೇನಿನಲ್ಲಿ ಬಹಳ ಖ್ಯಾತಿ ಗಳಿಸಿವೆ.

18ನೇ ಶತಮಾನದಲ್ಲಿ ನಿರ್ಮಾಣವಾದ ಹೋರ್ಟಾ ಉದ್ಯಾನ ಅಲ್ಲಿಯ ಬಾರ್ಸಿಲೋನಾದಲ್ಲಿದೆ. ಅದರಲ್ಲಿ 750 ಮೀಟರ್ ಉದ್ದದವರೆಗೆ ಸೈಪ್ರಸ್ (ಕೋನಿಫರ್) ಮರಗಳನ್ನು ಚಕ್ರವ್ಯೂಹದ ಆಕಾರದಲ್ಲಿ ಬೆಳೆಸಿ ಕಟ್ಟೆಯ ಆಕಾರದಲ್ಲಿ ಕತ್ತರಿಸಲಾಗಿದ್ದು, ವಿದೇಶಿ ಪ್ರವಾಸಿಗರು ಭೇಟಿ ನೀಡುವ ತಾಣವಾಗಿದೆ. ಈಗ ಅದೇ ಮಾದರಿಯಲ್ಲಿ ಸ್ಪೇನಿನ ವಿಲ್ಲಾಪ್ರಸೆಂಟ್ ಎಂಬ ಹಳ್ಳಿಯಲ್ಲಿ ಸೈಪ್ರಸ್ ಗಿಡಗಳ ಚಕ್ರವ್ಯೂಹದ ಉದ್ಯಾನ ನಿರ್ಮಿಸಲಾಗಿದ್ದು, ಇದು ಸ್ಪೇನಿನಲ್ಲಿ ಅತ್ಯಂತ ದೊಡ್ಡ ಚಕ್ರವ್ಯೂಹದ ಉದ್ಯಾನವೆಂಬ ಹಿರಿಮೆಗೆ ಪಾತ್ರವಾಗಿದೆಯಂತೆ. ವ್ಯತ್ಯಾಸವೆಂದರೆ ಇಲ್ಲಿ ವ್ಯೂಹ ರಚನೆ ವೃತ್ತಾಕಾರದಲ್ಲಿರದೆ ಆಯತಾಕಾರದಲ್ಲಿದೆ.

ಹಚ್ಚ ಹಸಿರಾದ ಸೈಪ್ರಸ್ ಗಿಡಗಳನ್ನು ಬೆಳೆಸಿ ನೀಟಾಗಿ ಕತ್ತರಿಸಲಾಗಿದೆ. ಈ ಕಟ್ಟೆ ಒಂದು ಮೀಟರ್ ಅಗಲ ಹಾಗೂ 2.5 ಮೀಟರ್ ಎತ್ತರವಿದೆ. ಒಟ್ಟು ಕಟ್ಟೆಯ ವಿಸ್ತೀರ್ಣ 5625 ಚ.ಮೀಟರ್. ಮಧ್ಯೆ ಇರುವ ಮಾರ್ಗದ ಒಟ್ಟು ಉದ್ದ ಐದು ಕಿ.ಮೀಟರ್. ಪ್ರವಾಸಿಗರು ಒಳಗೆ ಪ್ರವೇಶಿಸುವ ಮುನ್ನ ಈ ಐದು ಕಿ.ಮೀ. ಮಾರ್ಗವನ್ನು ಕಾಲ್ನಡಿಗೆಯಲ್ಲಿ ಸವೆಸುವ ತಾಕತ್ತಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು ಒಳಿತು. ಏಕೆಂದರೆ ಒಮ್ಮೆ ಒಳಗೆ ಪ್ರವೇಶಿಸಿದರೆ ಹೊರಗೆ ಬೀಳುವ ದ್ವಾರ ಒಂದೇ. ಅಡ್ಡ, ಉದ್ದವಾಗಿ ಸಾಗುವ ಈ ಹಸಿರು ತುಂಬಿದ ಮಾರ್ಗದಲ್ಲಿ ನಡೆದುಕೊಂಡು ಹೋಗುವುದರಿಂದ ಶರೀರಕ್ಕೆ ಒಳ್ಳೆಯ ವ್ಯಾಯಾಮ ಸಿಗುತ್ತದೆ ಎಂಬುದು ಸ್ಥಳೀಯರ ಅಂಬೋಣ.

■ ಎಸ್. ಹೆಗಡೆ